# ಕೃತಿ ಕರಬಂಧ

## ಪ್ರೇಮ ಸಂಬಂಧ



‘ಗೂಗ್ಲಿ’ ಹುಡುಗಿ ಕೃತಿ ಕರಬಂಧ ಗೊತ್ತಲ್ಲ. ಕನ್ನಡದಿಂದ ಹಿಂದಿಗೆ ಜಿಗಿದು ಅಲ್ಲಿ ಸಖತ್ ಮಿಂಚುತ್ತಿರುವ ಹುಡುಗಿ ಈಗ ಸುದ್ದಿಯಾಗಿರುವುದು ಬೇರೆಯೇ ಕಾರಣಕ್ಕೆ. ಕರಬಂಧಗೆ ಪ್ರೇಮಸಂಬಂಧ ಒದಗಿಬಂದಿದೆ. ಹೂ ನಗುವಿನ ಮೂಲಕ ಹುಡುಗರ ನಿದ್ದೆಗೆಡಿಸಿದ ಹುಡುಗಿಯ ಹೃದಯದಲ್ಲೀಗ ಪುಲ್ಕಿತ್ ಹೆಸರಿನ ಚಿಟ್ಟೆಗಳು ಹಾರಾಡುತ್ತಿವೆಯಂತೆ.

ಯಾರು ಈ ಪುಲ್ಕಿತ್? ಮಾಡೆಲಿಂಗ್ ಜಗತ್ತಿನಿಂದ ಕಿರುತೆರೆಗೆ ಜಂಪ್ ಮಾಡಿ ನಂತರ ಹಿರಿತೆರೆಗೂ ಜಿಗಿದಿರುವ ನಟ ಪುಲ್ಕಿತ್. ಈ ಹುಡುಗನ ಜೊತೆ ಕೃತಿ, ಕರದಲ್ಲಿ ಕರ ಬೆಸೆದು ಅಡ್ಡಾಡುತ್ತಿರುವುದು ತೀರಾ ಹೊಸ ಸುದ್ದಿಯೇನೂ ಅಲ್ಲ. ಬಿ ಟೌನ್‌ನಲ್ಲಿ ಈ ಗುಸುಗುಸು ಬಿಸಿಬಿಸಿ ಸುದ್ದಿಯಾಗಿ, ಅದಕ್ಕೆ ಕೃತಿ ‘ಅಂಥದ್ದೆಲ್ಲ ಏನಿಲ್ಲ, ಸುಮ್ನಿರಿ’ ಎಂದು ಪತ್ರಕರ್ತರಿಗೆ ಗದರಿದ್ದೂ ಆಗಿಹೋಗಿದೆ. ಆದರೆ ಈಗ ಅದೇ ಕೃತಿ ಇದು ವದಂತಿಯಲ್ಲ, ನಿಜ. ನಾನು ಮತ್ತೆ ಪುಲ್ಕಿತ್ ಡೇಟಿಂಗ್‌ನಲ್ಲಿದ್ದೀವಿ. ಸದ್ಯವೇ ಮದ್ವೆನೂ ಆಗ್ತಿದ್ದೀವಿ’ ಎಂದು ಹೇಳಿದ್ದಾಳೆ. ಅಷ್ಟೇ ಅಲ್ಲ, ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಗೆಳೆಯನೊಟ್ಟಿಗಿನ ಹಲವು ಚಿತ್ರಗಳನ್ನೂ ಅವರು ಹಂಚಿಕೊಂಡಿದ್ದಾರೆ.

ಇತ್ತೀಚೆಗೆ ಕೃತಿ ನಟನೆಯ ‘ಹೌಸ್‌ಫುಲ್ 4’ ಸಿನಿಮಾ ತೆರೆಕಂಡು ಸದ್ದು ಮಾಡಿತ್ತು. ಸದ್ಯಕ್ಕೆ ಕೃತಿ ಕೈಯಲ್ಲಿ ನಾಲ್ಕು ಸಿನಿಮಾಗಳಿವೆ. ಅವರು ಮತ್ತೆ ಕನ್ನಡಕ್ಕೆ ಮರಳುತ್ತಾರೆ ಎಂಬ ಸುದ್ದಿಯೂ ಗಾಂಧಿನಗರದ ಗಲ್ಲಿಗಳಲ್ಲಿ ಆಗೀಗ ಸುಳಿದಾಡುತ್ತಿದೆ.

# ಸುದೀಪ್ ‘ಸ್ವಂತ’ ಸಿನಿಮಾ ಮಾಡ್ತಾರಂತೆ!



ನಮ್ಮ ಕಿಚ್ಚ ಸುದೀಪ್ ಅವರಿಗೂ ರೀಮೇಕ್ ಸಿನಿಮಾಗಳಿಗೂ ಅವಿನಾಭಾವ ಎನ್ನುವಂಥ ಸಂಬಂಧ. ಅವರಿಗೆ ನಿರ್ದೇಶನದ ಕ್ಯಾಪ್ ತೊಡಿಸಿದ ‘ಮೈ ಆಟೊಗ್ರಾಫ್’ ಕೂಡ ರೀಮೇಕ್ ಸಿನಿಮಾವೇ. ನಂತರ ‘ಜಸ್ಟ್ ಮಾತ್ ಮಾತಲ್ಲಿ’ ಎಂಬ ಸ್ವಮೇಕ್ ಸಿನಿಮಾ ಮಾಡಲು ಹೋಗಿ ಕೈಸುಟ್ಟುಕೊಂಡರು. ಅದನ್ನೇ ನೆಪವಾಗಿಟ್ಟುಕೊಂಡು ಮತ್ತೆ ರೀಮೇಕ್ ಜಾಡಿಗೆ ಮರಳಿದ ಸುದೀಪ್, ನಿರ್ದೇಶಿಸಿದ್ದು ಬರೀ ರೀಮೇಕ್ ಸಿನಿಮಾಗಳನ್ನೇ.

‘ಮಾಣಿಕ್ಯ’ದ ನಂತರ ನಿರ್ದೇಶನದಿಂದ ಕೊಂಚ ದೂರವುಳಿದಿದ್ದ ಅವರು ಇತ್ತೀಚೆಗೆ ಮತ್ತೆ ಡೈರೆಕ್ಟರ್ ಕ್ಯಾಪ್ ತೊಡಲಿದ್ದಾರೆ ಎಂಬ ವದಂತಿ ಹಬ್ಬಿತ್ತು. ಅದೇ ವದಂತಿಗೆ ಕೈಕಾಲು ಮೂಡಿ, ‘ಭರತ್ ಅನೆ ನೇನು’ ಸಿನಿಮಾವನ್ನು ಸುದೀಪ್ ಕನ್ನಡದಲ್ಲಿ ನಿರ್ದೇಶಿಸಲಿದ್ದಾರೆ ಎಂದು ಕೆಲ ಮಾಧ್ಯಮಗಳಲ್ಲಿ ವರದಿಯೂ ಆಯಿತು. ಅದರಲ್ಲಿ ನಿಜವಿಲ್ಲ ಎಂದು ಸ್ವತಃ ಸುದೀಪ್ ಈಗ ಖಚಿತಪಡಿಸಿದ್ದಾರೆ. ‘ತಾವು ಭರತ್ ಅನೆ ನೇನು ಸಿನಿಮಾ ರೀಮೇಕ್ ಮಾಡುತ್ತಿಲ್ಲ’ ಎಂದು ಹೇಳಿರುವ ಅವರು ‘ಸ್ವಮೇಕ್ ಚಿತ್ರವೊಂದನ್ನು ನಿರ್ದೇಶಿಸಲು ಸಿದ್ಧತೆ ನಡೆಸುತ್ತಿದ್ದೇನೆ’ ಎಂಬ ಸುಳಿವನ್ನೂ ಬಿಟ್ಟುಕೊಟ್ಟಿದ್ದಾರೆ.

ಅಂತೂ ಕಿಚ್ಚ ಎಷ್ಟೋ ವರ್ಷಗಳ ನಂತರ ಮತ್ತೆ ‘ಸ್ವಂತ’ ಸಿನಿಮಾ ಮಾಡಲು ಹೊರಟಿದ್ದಾರೆ. ಅದು ಪ್ರಯೋಗಾತ್ಮಕವಾಗಿರುತ್ತದೆಯಾ ಅಥವಾ ಅವರು ಉಳಿದೆಲ್ಲ ರೀಮೇಕ್ ಸಿನಿಮಾಗಳ ಹಾಗೆ ಮಾಸ್ ಮಸಾಲೆ ಅರೆದು ಹಣ ದೋಚುವ ಟ್ರಿಕ್ ಅಷ್ಟೇ ಆಗುತ್ತದೆಯಾ ಎನ್ನುವುದನ್ನು ಕಾದು ನೋಡಬೇಕಷ್ಟೆ.